

# ಲಾಕ್‌ಡೌನ್ ಮತ್ತು ಮಕ್ಕಳು

**ಕೊರೊನಾ ಬಿಕ್ಕಟ್ಟಿನ ಸಂದರ್ಭ ಮಕ್ಕಳ ಮೇಲೆ ಬೀರಿರುವ ಧನಾತ್ಮಕ ಪರಿಣಾಮಗಳೇನು? ಋಣಾತ್ಮಕ ಪರಿಣಾಮಗಳೇನು?**

■ ಡಾ. ಕೆ. ಬಿ. ರಂಗಸ್ವಾಮಿ

ಇಡೀ ಜಗತ್ತನ್ನೇ ತಲ್ಲಣಗೊಳಿಸಿರುವ ಕೊರೊನಾ ಎಂಬ ಒಂದು ಸೂಕ್ಷ್ಮಾಣು ಮಕ್ಕಳೆಡೆಗೆ ಕೊಂಚ ಮೃದು ಧೋರಣೆ ತಳೆದಿರುವುದಂತೂ ನಿಜ. ಇದುವರೆಗೆ ಲಭ್ಯವಾಗಿರುವ ಅಂಕಿಅಂಶಗಳ ಪ್ರಕಾರ ವಯಸ್ಕರಿಗೆ ಹೋಲಿಸಿದರೆ ಮಕ್ಕಳಲ್ಲಿ ಕೊರೊನಾದ ಕಾರಣದಿಂದ ಉಂಟಾಗಿರುವ ಸಾವುನೋವಿನ ಪ್ರಮಾಣ ನಗಣ್ಯವೆಂತಲೇ ಹೇಳಬಹುದು. ಇದಕ್ಕೆ ಅಂದಾಜಿಸಲಾದ ಹಲವಾರು ಕಾರಣಗಳಿದ್ದರೂ ಇಂಥದ್ದೇ ಎಂದು ಖಚಿತವಾಗಿ ಹೇಳಲಾಗದು. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಆಡಳಿತ ವರ್ಗ ಮತ್ತು ಶಿಕ್ಷಣ ಸಂಸ್ಥೆಗಳು ಅವರನ್ನು ಕೊಂಚ ಮುಂಚಿತವಾಗಿಯೇ ಶಾಲೆಯ ಪರಿಸರದಿಂದ ಹೊರಗುಳಿಸಿದ ಕ್ರಮವೂ ಶ್ಲಾಘನೀಯ. ಈ ಲಾಕ್‌ಡೌನ್ ಸಂದರ್ಭದಲ್ಲಂತೂ ಮಕ್ಕಳು ಪರೀಕ್ಷೆ, ಶಾಲೆ, ಹೋಮ್ ವರ್ಕ್ ಮುಂತಾದ ಜಂಜಡಗಳಿಂದ ಮುಕ್ತರಾಗಿ ಮನೆಯ ಪರಿಸರದಲ್ಲೇ ಕಾಲಕಳೆಯುವಂತಾಗಿದೆ. ಲಾಕ್‌ಡೌನ್ ಮುಗಿದ ನಂತರವೂ ಸುರಕ್ಷತೆಯ ದೃಷ್ಟಿಯಿಂದ ಮಕ್ಕಳು ಕೆಲಕಾಲ ಮನೆಯಲ್ಲೇ ಇರಬೇಕಾಗುತ್ತದೆ. ಇದು ಮಕ್ಕಳ ಆರೋಗ್ಯದ ಮೇಲೆ ಮತ್ತು ಸಾಮಾಜಿಕ ಜೀವನದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬುದರತ್ತ ಗಮನ ಹರಿಸೋಣ.

## ಧನಾತ್ಮಕ ಪರಿಣಾಮಗಳು

- ತಂದೆತಾಯಂದಿರಿಬ್ಬರೂ ಉದ್ಯೋಗಿಗಳಾಗಿರುವ ಕಾರಣಕ್ಕೋ ಮತ್ತಿನ್ನಾವುದೋ ಕಾರಣಕ್ಕೋ ಅವರ ಸಾಂಗತ್ಯ ಲಭಿಸುತ್ತಿಲ್ಲ ಎಂಬ ಕೊರಗಿದ್ದ ಮಕ್ಕಳಿಗೆ, ಈ ಲಾಕ್‌ಡೌನ್ ಖಂಡಿತವಾಗಿಯೂ ಒಂದು ವರದಾನವಾಗಿ ಪರಿಣಮಿಸಿದೆ.
- ಹೋಮ್ ವರ್ಕ್, ಟ್ಯೂಷನ್‌ಗಳ ಒತ್ತಡದಲ್ಲೇ ನಲುಗುತ್ತಿದ್ದ ಮಕ್ಕಳು ನಿರಾಳರಾಗಿದ್ದಾರೆ.
- ಅಡುಗೆ ಕಾರ್ಯಗಳಲ್ಲಿ ಕೈ ಜೋಡಿಸುತ್ತಾ, ಸಣ್ಣಪುಟ್ಟ ಗೃಹಕೃತ್ಯಗಳನ್ನು ನಿರ್ವಹಿಸುತ್ತಾ ಮಕ್ಕಳು ಸ್ವಾವಲಂಬನೆಯನ್ನು ಕಲಿತಿದ್ದಾರೆ.
- ಸಂಗೀತ, ಚಿತ್ರಕಲೆ, ಸಾಹಿತ್ಯ, ನೃತ್ಯ, ತೋಟಗಾರಿಕೆ ಮುಂತಾದ ತಮ್ಮಿಷ್ಟದ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.
- ಕಂಡದ್ದನ್ನೆಲ್ಲ ತಿನ್ನಬೇಕೆಂಬ ತುಡಿತಕ್ಕೆ ಕಡಿವಾಣ ಹಾಕುವಂಥ ಮತ್ತು ಮಿತವ್ಯಯದಂಥ ಹಲವು ಅತ್ಯುತ್ತಮ ಗುಣಗಳನ್ನು ಮಕ್ಕಳು ಕಲಿತಿದ್ದಾರೆ.
- ಬೇಸಿಗೆಯಲ್ಲಿ ಮಕ್ಕಳನ್ನು ಕಾಡುತ್ತಿದ್ದ ವಾಂತಿಭೇದಿ, ಕಾಮಾಲೆ, ಸೀತಾಳೆಸಿಡುಬು, ಅಲರ್ಜಿ, ಮುಂತಾದ ಆರೋಗ್ಯ ಸಮಸ್ಯೆಗಳಿಂದ ಅವರು ಮುಕ್ತರಾಗಿದ್ದಾರೆ.
- ವೈಯಕ್ತಿಕ ಅಂತರ ಮತ್ತು ಸ್ವಚ್ಛತೆಯ ಪ್ರಾಮುಖ್ಯತೆಯನ್ನು ಮಕ್ಕಳು ಅರಿತಿದ್ದಾರೆ.
- ಮಾನವೀಯ ಮೌಲ್ಯಗಳ ಅರಿವಾಗಿದೆ.

## ಋಣಾತ್ಮಕ ಪರಿಣಾಮಗಳು

- ಮನೆಗಳಲ್ಲೇ ಬಂಧಿಗಳಾಗಿರುವ ಕೆಲವು ಮಕ್ಕಳು ಟೀವಿ ಮತ್ತು ಗ್ಯಾಜೆಟ್‌ಗಳಿಗೆ ಹೆಚ್ಚಾಗಿ ಅಂಟಿಕೊಂಡು ಅವುಗಳಿಗೆ ದಾಸರಾಗಿಬಿಡುವ ಸಾಧ್ಯತೆಯಿರುತ್ತದೆ.
- ಶಾಲೆಯ ಪರಿಸರ, ಶಿಕ್ಷಕರ ಪ್ರೀತಿ ಮತ್ತು ಗೆಳೆಯರ ಒಡನಾಟದಿಂದ ವಂಚಿತರಾಗಿದ್ದಾರೆ.
- ಸಾಮಾನ್ಯವಾಗಿ ಬೇಸಿಗೆಯೆಂದರೆ ಮಕ್ಕಳಿಗೆ ಖುಷಿಯೋ ಖುಷಿ. ಹಳ್ಳಿಗಳಲ್ಲಿ ಲಗೋರಿ, ಮರಕೋತಿಯಂಥ ಮತ್ತು ನಗರಗಳಲ್ಲಿ ಕ್ರಿಕೆಟ್, ಫುಟ್‌ಬಾಲ್‌ನಂಥ ಆಟಗಳನ್ನು ಆಡುತ್ತಲೋ ಬೆಟ್ಟಗುಡ್ಡ, ಕೆರೆತೊರೆ ಎಂದು ಮನೆಯಿಂದ ಹೊರಗೇ ಕಾಲಕಳೆಯುತ್ತಲೋ ಗೆಳೆಯರೊಂದಿಗೆ ಆನಂದಿಸುತ್ತಿರುತ್ತಾರೆ. ಲಾಕ್‌ಡೌನ್ ಅವರ ಆ ಖುಷಿಯನ್ನು ಕಸಿದುಕೊಂಡುಬಿಟ್ಟಿದೆ.
- ಬೇಸಿಗೆಯ ಖುಷಿಯನ್ನು ಇಮ್ಮಡಿಸುವ ಸಮಾರಂಭ ಮತ್ತು ಪ್ರವಾಸಗಳಿಂದ ಮಕ್ಕಳು ವಂಚಿತರಾಗಿದ್ದಾರೆ. ಕಡೇ ಪಕ್ಷ ಅಜ್ಜ ಅಜ್ಜಿಯ ಮನೆಗೂ ಹೋಗುವಂತಿಲ್ಲ.
- ತಾಯಿ ತಯಾರಿಸಿ ಬಡಿಸುವ ರುಚಿ ರುಚಿಯಾದ ಭಕ್ಷ್ಯಭೋಜ್ಯಗಳನ್ನು ಸವಿಯುತ್ತಾ, ದೈಹಿಕ ಚಟುವಟಿಕೆಗಳಿಂದ ವಿಮುಖರಾಗಿ ಅತಿತೂಕ ಮತ್ತದಕ್ಕೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗಳಿಗೆ ಮಕ್ಕಳು ತುತ್ತಾಗುವ ಸಾಧ್ಯತೆ ಹೆಚ್ಚು.
- ಇತ್ತ ಹೆತ್ತವರ ದುಡಿಮೆಯೂ ಇಲ್ಲದೆ, ಅತ್ತ ಶಾಲೆಗಳಲ್ಲಿ ನೀಡಲಾಗುವ ಉಚಿತ ಆಹಾರಗಳೂ ಇಲ್ಲದೆ ಅನೇಕ ಕೂಲಿಕಾರ್ಮಿಕರ ಮಕ್ಕಳು ಅಪೌಷ್ಟಿಕತೆ ಮತ್ತದಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ತುತ್ತಾಗುತ್ತಾರೆ.
- ಮನೆಯಲ್ಲೇ ಬಂಧಿಯಾಗಿರುವ ಹಲವು ಮಕ್ಕಳಲ್ಲಿ ಅತಿ ತುಂಟಾಟ, ಹಟಮಾರಿತನ, ಜಗಳಗಂಟಿತನ, ನಿದ್ರಾಹೀನತೆ, ಖಿನ್ನತೆ, ಚಡಪಡಿಕೆ ಮುಂತಾದ ಮಾನಸಿಕ ಸಮಸ್ಯೆಗಳು ತಲೆದೋರಬಹುದು. ಪದೇ ಪದೇ ಕೈ ತೊಳೆಯುವ ಕ್ರಿಯೆಯು ಕೆಲವು ಮಕ್ಕಳಲ್ಲಿ ಗೀಳು ರೋಗವಾಗಿ ಪರಿವರ್ತನೆಗೊಳ್ಳಬಹುದು. ಅಲ್ಲಲ್ಲಿ ಕೇಳಿಬರುವ ಕೊರೊನಾದ ಸಾವಿನ ಸುದ್ದಿ ಕೆಲವು ಮಕ್ಕಳಲ್ಲಿ ಅನಗತ್ಯ ಭಯಕ್ಕೆ ಕಾರಣವಾಗಬಲ್ಲದು.
- ಕೊರೊನಾ, ಲಾಕ್‌ಡೌನ್ ಮುಂತಾದ ಸಂಗತಿಗಳು ಮಕ್ಕಳಿಗೆ ಭವಿಷ್ಯದಲ್ಲಿ ಒಂದು ಕೆಟ್ಟ ಘಟನೆಯಂತೆ ನೆನಪಿನಲ್ಲುಳಿಯಬಹುದು.

ಒಟ್ಟಿನಲ್ಲಿ ಈ ಲಾಕ್‌ಡೌನ್ ಎಂಬುದು ಮಕ್ಕಳ ಮಟ್ಟಿಗೆ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳೆರಡಕ್ಕೂ ಕಾರಣವಾಗಿರುವುದಂತೂ ನಿಜ. ಋಣಾತ್ಮಕ ಸಮಸ್ಯೆಗಳನ್ನು ಗುರುತಿಸಿ, ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಅವುಗಳ ಪರಿಹಾರಕ್ಕಾಗಿ ಯೋಜನೆಗಳನ್ನು ರೂಪಿಸಬೇಕಾದುದು ಹೆತ್ತವರು ಮತ್ತು ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ.

ಲೇಖಕರು ತುಮಕೂರಿನ 'ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯ'ದಲ್ಲಿ ಮಕ್ಕಳ ವಿಭಾಗದ ಮುಖ್ಯಸ್ಥರು.